**ಪುರಸಭೆಗಳ ಸಂಪನ್ಮೂಲ ಕ್ರೋಢೀಕರಿಸುವುದು**

1062( 1226) ಶ್ರೀ ಬಸವರಾಜ್ ಮಂಡಿಮಠ್ ಜಿ. (ಚಿಳ್ಳಕೆರೆ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಪುರಸಭೆಗಳು ತಮ್ಮ ಸಂಪನ್ಮೂಲಗಳನ್ನು ಕ್ರೋಢೀಕರಿಸುವ ಬಗ್ಗೆ ಅಲಸ್ಯ ಮತ್ತು ಅಲಕ್ಷ್ಯಗಳಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ಯಾವ ರೀತಿಯ ಕ್ರಮ ಕೈಗೊಳ್ಳಲಾಗಿದೆ;

(ಆ) ಚಿಳ್ಳಕೆರೆ ಪುರಸಭೆಯು ತನ್ನ ಬಾಬ್ತು ಸ್ಥಿರಾಸ್ತಿಗಳಾದ ವಾಣಿಜ್ಯ ಮಳಿಗೆಗಳು, ವಸತಿ ಗೃಹಗಳು ಮುಂತಾವುಗಳಿಂದ ಪ್ರಸ್ತುತ ಮಾರುಕಟ್ಟೆ ದರದಲ್ಲಿ ಬಾಡಿಗೆಗಳನ್ನು ವಸೂಲಿ ಮಾಡುತ್ತಿದೆಯೆ ; ಇಲ್ಲವಾದಲ್ಲಿ ಪುರಸಭೆಗೆ ಬರಬಹುದಾದ ಆದಾಯದ ಮೂಲಕ್ಕೆ ಧಕ್ಕೆ ಅಲ್ಲವೆ; ಇದನ್ನು ಸರಿಪಡಿಸಲು ಕೈಗೊಂಡ ಕ್ರಮಗಳೇನು;

ಶ್ರೀ ಬಿ. ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು)

(ಅ)- ಹೌದು ಕೆಲವಾಯ ವಸೂಲಾತಿಯು ಮಂದಗತಿಯಲ್ಲಿ ಸಾಗಿದ್ದು, ಸಂಪನ್ಮೂಲಗಳ ಕ್ರೋಢೀಕರಣದಲ್ಲಿ ನಿರೀಕ್ಷಿತ ಮಟ್ಟದ ಪ್ರಗತಿಯನ್ನು ಸಾಧಿಸಲಾಗುತ್ತಿಲ್ಲ. ಈ ಬಗ್ಗೆ ಪ್ರತಿ ನಗರ ಸ್ಥಳೀಯ ಸಂಸ್ಥೆಗಳಿಗೂ ಪ್ರತಿ ಮಾಹೆ ತೆರಿಗೆ ವಸೂಲಾತಿಗಾಗಿ, ಗುರಿ ನಿಗದಿ ಗಣನೀಯ ಪ್ರಗತಿಯನ್ನು ಸಾಧಿಸಲು ಕ್ರಮ ತೆಗೆದುಕೊಳ್ಳಲಾಗುವುದು.

(ಆ) ಈ ವಿಷಯದಲ್ಲಿ ವರದಿಯನ್ನು ಪಡೆದು ತುರ್ತು ಕ್ರಮವನ್ನು ಜರುಗಿಸಲಾಗುವುದು.

**ಚಳ್ಳಕೆರೆ ತಾಲ್ಲೂಕಿನಲ್ಲಿ ಅಂತರ್ಜಲ ಮಟ್ಟ ಸುಧಾರಿಸುವುದು**

063 ( 1331) ಶ್ರೀ ಬಸವರಾಜ್ ಮಂಡಿಮಠ್ ಜಿ. (ಚಿಳ್ಳಕೆರೆ) : ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಚಿತ್ರದುರ್ಗ ಜಿಲ್ಲೆಯಾದರಲ್ಲೂ ಚಳ್ಳಕೆರೆ ತಾಲ್ಲೂಕಿನಲ್ಲಿ ಅಂತರ್ಜಲ ಮಟ್ಟ 400 ರಿಂದ 500 ಅಡಿಗಳವರೆಗೆ ಕುಸಿದಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಕುಸಿದಿರುವ ಅಂತರ್ಜಲ ಮಟ್ಟ ಮೇಲೆತ್ತಲು ತಾಲ್ಲೂಕಿನಲ್ಲಿ ಹರಿಯುವ ವಿಕ್ಷಿಕ ನದಿಯಾದ ವೇದಾವತಿಗೆ 8 ಕಿ.ಮೀ.ಅಂತರದಲ್ಲಿ ಚೆಕ್ ಡ್ಯಾಂ ಬ್ಯಾರೇಜುಗಳನ್ನು ನಿರ್ಮಿಸುವ ಪ್ರಸ್ತಾವನೆ : ಮುಂದಿಗಳೇನಾದರೂ ಬಂದಿದೆಯೇ; ಬಂದಿದ್ದಲ್ಲಿ ತೆಗೆದುಕೊಂಡ ಕ್ರಮಗಳೇನು ;

(ಇ) ಈ ಸಮಸ್ಯೆ ಪರಿಹಾರಕ್ಕೆ ಸರ್ಕಾರದ ಪರಿಹಾರ ಕ್ರಮವೇನು?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂ ವಿಜ್ಞಾನ ಸಚಿವರು)

(ಅ) ಹೌದು

(ಆ) ಇಲ್ಲ ಉದ್ಭವಿಸುವುದಿಲ್ಲ

ಇ) ಹೆಚ್ಚು ಹೆಚ್ಚು ಕೃತಕ ಮರು ಪೂರೈಕೆ ರಚನೆಗಳ ನಿರ್ಮಾಣ ಹಾಗೂ ವಿಧೇಯಕವನ್ನು ಜಾರಿಗೆ ತರುವ ಮುಖೇನ ಹೆಚ್ಚು ಅಂತರ್ಜಲ ಬಳಕೆಯ ನಿಯಂತ್ರಣ, ಇವುಗಳು ಪ್ರಮುಖ ಪರಿಹಾರ ಕ್ರಮಗಳಾಗಿದೆ.

**ಬಸವನ ಬಾಗೇವಾಡಿಯಲ್ಲಿ ಸಮುದಾಯ ಭವನಗಳು**

1065( 1264) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬಸವನ ಬಾಗೇವಾಡಿ ಕ್ಷೇತ್ರದಲ್ಲಿ ಮಂಜೂರು ಮಾಡಲಾದ ಸಮುದಾಯಭವನಗಳ ಸಂಖ್ಯೆ ಎಷ್ಟು;

ಆ) ಸದರಿ ಸಮುದಾಯ ಭವನಗಳನ್ನು ಮಂಜೂರು ಮಾಡಲು ಅನುಸರಿಸಿದ ಮಾನದಂಡವೇನು;

ಶ್ರೀ ಬಿ. ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು)

ಅ) ಮೂರು

ಆ) ಬಸವನ ಬಾಗೇವಾಡಿ ಪಟ್ಟಣ ಪಂಚಾಯಿತಿ ಕರಾವು ಪಾಸು ಮಾಡಿ ಕಳುಹಿಸಿದ ಪ್ರಕಾರ ಮಂಜೂರು ಮಾಡಲಾಗಿದೆ. ಬಸವನ ಬಾಗೇವಾಡಿ ಪಟ್ಟಣಕ್ಕೆ ಸನ್ 1999-2000ನೇ ಸಾಲಿನಲ್ಲಿ ಪಟ್ಟಣ ಪಂಚಾಯತಿಯ ಶೇ. 18ರ ಅನುದಾನದಲ್ಲಿ ಮಾತ್ರ ವಡ್ಡರ ಸಮಾಜದವರ ಸಲುವಾಗಿ ರೂ. 1,40,000-00ಗಳ ಅಂದಾಜಿನ ಒಂದು ಸಮಾಜ ಮಂದಿರವನ್ನು ಮಂಜೂರು ಮಾಡಲಾಗಿದೆ. ಸದರಿ ಕೆಲಸಪ್ರಗತಿಯಲ್ಲಿದೆ. ಅದಲ್ಲದೇ 1998-99ನೇ ಸಾಲಿನಲಿ ಬಸವನ ಬಾಗೇವಾಡಿ ವಾರ್ಡ್ ನಂ.4ರಲ್ಲಿ ಬಸವನ ನಗರದಲ್ಲಿ ಹರಿಜನರಿಗಾಗಿ ಕೊಳಚೆ ನಿರ್ಮೂಲನಾ ಮಂಡಳಿಯಿಂದ ಒಂದು ಸಮುದಾಯ ಭವನ ಮತ್ತು ಮಾದರ ಗಲ್ಲಿಯಲ್ಲಿ ಪಟ್ಟಣ ಪಂಚಾಯಿತಿಯು ಪ್ರತಿಶತ 18ರ ನುದಾನದಲ್ಲಿ ಒಂದು ಡಾ: ಅಂಬೇಡ್ಕರ್ ಭವನವನ್ನು ಮಂಜೂರುಮಾಡಲಾಗಿದೆ.

**ಧಾರವಾಡ - ಹುಬ್ಬಳ್ಳಿಯಲ್ಲಿ ಕುಡಿಯುವ ನೀರಿನ ಸಮಸ್ಯೆ**

1070 ( 1242) ಶ್ರೀ ಬೆಲ್ಲದ ಚಂದ್ರಕಾಂತ್ ಗುರಪ್ಪ (ಧಾರವಾಡ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1. ಧಾರವಾಡ - ಹುಬ್ಬಳ್ಳಿ ಕುಡಿಯುವ ನೀರಿನ ಸಮಸ್ಯೆ ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಮಹಾನಗರದ ಕುಡಿಯುವ ನೀರಿನ ಸಮಸ್ಯೆ ಎಷ್ಟು ವರ್ಷಗಳಿಂದ ಇದೆ ಹಾಗೂ ಕುಡಿಯುವ ನೀರಿನ ಸಮಸ್ಯೆ ಪರಿಹರಿಸಲು ತೆಗೆದುಕೊಂಡಿರುವ ಶಾಶ್ವತ ಕ್ರಮಗಳು ಯಾವುವು?

3. ಮಹಾನಗರದ ನೀರು ಸರಬರಾಜು (ವಿತರಣೆ) ವ್ಯವಸ್ಥೆಯ ಇಂಜಿನಿಯರು, ದೋಷದಿಂದ ಸರಿಯಾದ ಪ್ರಮಾಣದಲ್ಲಿ ನೀರನ್ನು ಜನತೆಗೆ ಪೂರೈಸುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

4. ಸರ್ಕಾರದ ಶಾಶ್ವತವಾದ ಕುಡಿಯುವ ನೀರಿಗಾಗಿ ಯಾವ ಕ್ರಮ ತೆಗೆದುಕೊಳ್ಳುವ ಯೋಜನೆ ಇದೆ ಹಾಗೂ ಎರಡನೇ ಮೂರನೇ ಹಂತದ ಯೋಜನೆ ಎಂದು ಪ್ರಾರಂಭಿಸಲಾಗುವುದು?